ಡಾ. ಶಿವಾನಂದ ಎಂ. ಹಂಚಿನಾಳ

# ಆತ್ಮಕಥನಗಳು ಹೊಸ ಅನುಸಂಧಾನ



# ಹೊರಬೀಡು ಆತ್ಮಕತೆಯ ಸಾಮಾಜಿಕ ಆಯಾಮಗಳು

ಪ್ರೊ.ಪಾತಯ್ಯ ಎನ್
ಸಹಾಯಕ ಪ್ರಾಧ್ಯಾಪಕರು
ಕೆ.ಎಲ್.ಇ ಸಂಸ್ಥೆಯ ಎಸ್.ನಿಜಲಿಂಗಪ್ಪ ಕಾಲೇಜು
ರಾಜಾಜಿನಗರ, ಬೆಂಗಳೂರು-೧೦

ಹೊರಬೀಡು ಆತ್ಮಕತೆಯ ಸಂಜೀವರಾಯರ ಆತ್ಮ ಕಥನ. ಮೊದಲಿಗೆ ಇವರ ಸಂಕ್ಷಿಪ್ತ ಪರಿಚಯ ಮಾಡಿಕೊಡಲು ಬಯಸುತ್ತೇನೆ. ಡಾ.ಜಿ.ಸಂಜೀವರಾಯರವರು ಹುಟ್ಟಿದ್ದು ೧೯೬೩ ರಲ್ಲಿ ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು ಎಂ.ಗೊಲ್ಲಹಳ್ಳಿಯಲ್ಲಿ ಅಪ್ಪಟ ಕೂಲಿ ಬೇಸಾಯದ ದಲಿತ ಕುಟುಂಬದ ಅನಕ್ಷರಸ್ಥ ದಂಪತಿಗಳಾದ ಲಕ್ಷ್ಮಮ್ಮ ಮತ್ತು ಗಂಗಯ್ಯ ಇವರ ತಂದೆತಾಯಿ. ಪ್ರಸ್ತುತ ಇವರು ಮಧುಗಿರಿಯಲ್ಲಿ ಪಶು ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಬರೆದಿರುವ ಆತ್ಮಕತೆ ಹೊರಬೀಡು ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಉತ್ತಮ ಆತ್ಮಕಥೆ ಪುಸ್ತಕ ಪ್ರಶಸ್ತಿ ಗಳಿಸಿದೆ. ಹಾಗೆಯೆ ಇವರಿಗೆ ಮಧುಗಿರಿ ತಾಲ್ಲೂಕು ಆಡಳಿತ ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಹೊರಬೀಡು ಆತ್ಮ ಕತೆಯು ಭಿನ್ನವಾದ ಸಾಮಾಜಿಕ ಆಯಾಮಗಳಿಗೆ ಪಾತ್ರವಾದ ಕೃತಿಯಾಗಿದೆ. ಡಾ.ನೀಹಾ ರವಿಕುಮಾರ ಅವರ ಅಭಿಪ್ರಾಯದಂತೆ 'ಸಮಾಜದಿಂದ ದೂರವಾಗಿ ಬದುಕುವ ಆಚರಣೆಯಂತೆ "ಐರಾರ್ಕಿ ಸಿಸ್ಟಮ್" ನಿಂದ ನೊಂದಿರುವ ಪ್ರಧಾನ ಧಾರೆಯಿಂದ ದೂರವಿರುವ ಕಟ್ಟಕಡೆಯ ಸಮೂಹವನ್ನು ಸಮುದಾಯವನ್ನು ಸಾಂಕೇತಿಸುತ್ತದೆ'. ಹಾಗೂ ಇಂದಿನ ಅನೇಕ ಗ್ರಾಮೀಣ ಪರಿಸರದಲ್ಲಿ ಉಳಿದುಕೊಂಡು ಬಂದಿರುವ ಸಾಮಾಜಿಕ ಆಚರಣೆಯೆಂದರೆ ಹೊರಬೀಡು. ಈ ಒಂದು ಆಚರಣೆ ವರ್ಷಕ್ಕೊಮ್ಮೆ ಊರಿನ ಜನರೆಲ್ಲಾ ತಾವು ಸಾಕಿದ